ಬಾಲಿವುಡ್

# ಎಲ್ಲೆಡೆ ‘ಪಿ.ಕೆ’ ಹವಾ!

‘ಪಿ.ಕೆ ’ಚಿತ್ರಕ್ಕಾಗಿ ರೈಲು ಹಳಿಯ ಮೇಲೆ ಬೆತ್ತಲೆಯಾಗಿ ತೊಡೆಯ ಬಳಿ ರೇಡಿಯೊ ಹಿಡಿದು ನಿಂತ ಅಮೀರ್ ಖಾನ್ ಚಿತ್ರ ದೊಡ್ಡ ವಿವಾದವನ್ನೇ ಸೃಷ್ಟಿಸಿತು. ಅಮೀರ್ ಖಾನ್‌ರಂಥ ನಟ ಪ್ರಚಾರಕ್ಕಾಗಿ ಈ ರೀತಿಯೆಲ್ಲಾ ಮಾಡಬಹುದೇ ಎಂಬ ಪ್ರಶ್ನೆಗಳೆದ್ದವು. ಅದರ ಬೆನ್ನಲ್ಲೇ ಕುತೂಹಲಗಳೆದ್ದವು. ಅಮೀರ್ ಮಾಡುವ ಪ್ರತಿ ಪ್ರಯತ್ನದಲ್ಲಿಯೂ ಹೊಸತನವಿರುತ್ತದೆ. ವಿಶೇಷತೆಯೂ ಇರುತ್ತದೆ ಎಂಬ ನಂಬಿಕೆ ಅದಕ್ಕೆ ಕಾರಣ. ಅದೀಗ ನಿಜವಾಗುತ್ತಿದೆ.

ರಾಜ್‌ಕುಮಾರ್ ಹಿರಾನಿ ನಿರ್ದೇಶನದ ‘ಪಿ.ಕೆ’ ಚಿತ್ರದ ಟ್ರೇಲರ್ ನೋಡಿದವರು ಚಿತ್ರ ಬಾಕ್ಸಾಫೀಸ್‌ನಲ್ಲಿ ದೂಳೆಬ್ಬಿಸುವುದು ಖಚಿತ ಎನ್ನುತ್ತಿದ್ದಾರೆ. ಇದಕ್ಕೆ ಕಾರಣ ಅಮೀರ್ ಖಾನ್ ಅವರ ವಿವಿಧ ಅವತಾರಗಳು. ಚಿತ್ರವಿಚಿತ್ರ ಉಡುಗೆಗಳಲ್ಲಿ ಅಮೀರ್ ಪೋಸ್ಟರ್ ಹಾಗೂ ಟ್ರೇಲರ್‌ಗಳಲ್ಲಿ ಕಾಣಿಸಿಕೊಂಡಿದ್ದಾರೆ. ಚಿತ್ರದಲ್ಲಿ ಅಮೀರ್ ಅನ್ಯಗ್ರಹ ಜೀವಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ ಎನ್ನಲಾಗುತ್ತಿದೆ. ಪಾನ್ ಅನ್ನು ಅತಿಯಾಗಿ ಇಷ್ಟಪಡುವ ಈ ಅನ್ಯಗ್ರಹ ಜೀವಿಯ ಪಾತ್ರ ಸಹಜವಾಗಿ ಮೂಡಿಬರುವಂತೆ ಅಮೀರ್ ಪಾನ್ ಬೀಡಾವನ್ನು ಸದಾ ಜಗಿಯುತ್ತಲೇ ಇರುತ್ತಿದ್ದರಂತೆ. ತುಟಿಗೆ ರಂಗು ಬಣ್ಣದ ಬದಲು ಪಾನ್ ಮೂಲಕವೇ ಸಹಜವಾಗಿ ಮೂಡಿಬರಬೇಕು ಎಂದು ಅಮೀರ್ ಚಿತ್ರೀಕರಣದ ವೇಳೆ ಸಾವಿರಾರು ಬಾರಿ ಪಾನ್ ತಿಂದಿದ್ದಾರಂತೆ. ಚಿತ್ರದಲ್ಲಿ ಅಗಲವಾಗಿ ಕಣ್ಣರಳಿಸಿಕೊಂಡಿರುವ ಬಾಲಿವುಡ್‌ನ ಮಿ. ಪರ್ಫೆಕ್ಟ್ ಹಾಲಿವುಡ್‌ನ ಮಿಸ್ಟರ್ ಬೀನ್‌ರನ್ನು ಅನುಕರಿಸಿದ್ದಾರೆ ಎನ್ನುವ ಮಾತುಗಳೂ ಕೇಳಿಬರುತ್ತಿವೆ.

ಪೊಲೀಸ್, ಬ್ಯಾಂಡ್‌ವಾಲಾ ಹೀಗೆ ನಾನಾ ಅವತಾರಗಳಲ್ಲಿ ಕಾಣಿಸಿಕೊಂಡಿರುವ ಅಮೀರ್, ಚಿತ್ರದಲ್ಲಿ ಕೃತಕತೆಯ ಲವಲೇಶವೂ ಕಾಣಿಸಬಾರದು ಎಂದು ತಮ್ಮ ಪಾತ್ರಕ್ಕೆ ಹೊಸ ಬಟ್ಟೆಗಳ ಬದಲು



ಸೆಕೆಂಡ್‌ಹ್ಯಾಂಡ್ ಬಟ್ಟೆಗಳನ್ನೇ ಬಳಸಿದ್ದಾರಂತೆ. ಅಮೀರ್ ಖಾನ್ ವೈಭವೀಕರಣದಲ್ಲಿ ನಾಯಕಿ ಅನುಷ್ಕಾ ಶರ್ಮಾ ಹೆಚ್ಚೂ ಕಡಿಮೆ ಕಣ್ಮರೆಯಾಗಿದ್ದಾರೆ. ಅನುಷ್ಕಾ ಸಹ ವಿಭಿನ್ನ ಅವತಾರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಈ ಚಿತ್ರದ ಇನ್ನೂ 8 ತರಹೇವಾರಿ ಪೋಸ್ಟರ್‌ಗಳು ಬಿಡುಗಡೆಯಾಗಲಿವೆ. ಹಿರಾನಿ ಮತ್ತು ಅಮೀರ್ ಜೋಡಿ ‘ಥ್ರೀ ಈಡಿಯೆಟ್ಸ್’ ಬಳಿಕ ಮತ್ತೆ ಒಂದಾಗಿರುವುದರಿಂದ ‘ಪಿ.ಕೆ’ಯ ಕುರಿತು ಕುತೂಹಲ ಇಮ್ಮಡಿಸಿದೆ. ಮಿಗಿಲಾಗಿ ಟ್ರೇಲರ್ ಎಲ್ಲೆಡೆ ಸದ್ದು ಮಾಡುತ್ತಿದೆ. ಡಿ. 19ಕ್ಕೆ ‘ಪಿ.ಕೆ’ ಚಿತ್ರಮಂದಿರಗಳಿಗೆ ಲಗ್ಗೆ ಇಡುತ್ತಿದೆ. ಈ ವರ್ಷದ ಸೂಪರ್ ಹಿಟ್ ಚಿತ್ರಗಳೆಲ್ಲವೂ ‘ಪಿ.ಕೆ’ ಮುಂದೆ ತಲೆಬಾಗಲಿವೆ ಎನ್ನುವುದು ಬಿಟೌನ್‌ನಲ್ಲಿ ಕೇಳಿಬರುತ್ತಿರುವ ಅಭಿಪ್ರಾಯ.



# ನೇಹಾ ಮತ್ತೆ ಒಂಟಿ!

ಸ್ಕ್ವ್ಯಾಷ್ ಆಟಗಾರ ರಿತ್ವಿಕ್ ಭಟ್ಟಾಚರ್ಯ ಜತೆ ಡೇಟಿಂಗ್ ನಡೆಸಿದ್ದ ನಟಿ ನೇಹಾ ಧೂಪಿಯಾ ಈ ಅಮೆರಿಕನ್ ಸುಂದರನ ತೆಕ್ಕೆಗೆ ಜಾರಿಕೊಂಡಿದ್ದರು. ರಿತ್ವಿಕ್ ಮತ್ತು ನೇಹಾರ ಹತ್ತು ವರ್ಷಗಳ ಸಂಬಂಧ 2010ರ ಜೂನ್‌ನಲ್ಲಿ ಅಂತ್ಯಗೊಂಡಿತ್ತು. ಬಳಿಕ ವೆನೆಜುಲಾದ ಜೇಮ್ಸ್ ಸಿಲ್ವೆಸ್ಟರ್ ಜತೆ ಓಡಾಡಲು ಶುರು ಮಾಡಿದ್ದರು ನೇಹಾ. ಈಗ ಮೂರ್ನಾಲ್ಕು ವರ್ಷದ ಒಡನಾಟಕ್ಕೂ ಬ್ರೇಕ್ ಬಿದ್ದಿದೆ. ಭಾರತದಲ್ಲಿಯೇ ನೆಲೆಯೂರಿದ್ದ ಜೇಮ್ಸ್ ಕೆಲವು ತಿಂಗಳ ಹಿಂದಷ್ಟೇ ತಾಯ್ನಾಡಿಗೆ ಮರಳಿದ್ದಾರೆ. ಹೀಗೆ ಹೋದವರು ಮತ್ತೆ ಹಿಂದಿರುಗುವ ಲಕ್ಷಣಗಳು ಕಾಣಿಸುತ್ತಿಲ್ಲ. ದೂರಾದ ಬಳಿಕವೂ ಸಂಬಂಧ ಉಳಿಸಿಕೊಳ್ಳಲು ಇಬ್ಬರೂ ಪ್ರಯತ್ನಿಸಿದ್ದಾರೆ. ಆದರೆ ಅದು ಸಾಧ್ಯವಾಗಿಲ್ಲ ಎನ್ನಲಾಗುತ್ತಿದೆ. ನೇಹಾ ಕೂಡ ಇದರ ಬಗ್ಗೆ ತುಟಿ ಬಿಚ್ಚುತ್ತಿಲ್ಲ. ಜೇಮ್ಸ್ ವಾಷಿಂಗ್ಟನ್‌ನಲ್ಲಿ ನೆಲೆಸಿದ್ದಾರೆ ಎಂದಷ್ಟೇ ಹೇಳುತ್ತಾರೆ ಅವರು. ಅದಕ್ಕಿಂತ ತಮ್ಮ ವೈಯಕ್ತಿಕ ಬದುಕಿನ ಬಗ್ಗೆ ಹೇಳಿಕೊಳ್ಳಲು ಅವರಿಗೆ ಇಷ್ಟವಿಲ್ಲವಂತೆ.

ನೇಹಾರ ಮಾಜಿ ಪ್ರಿಯಕರ ರಿತ್ವಿಕ್ ಕಳೆದ ವರ್ಷವಷ್ಟೇ ರೂಪದರ್ಶಿ ಪ್ರಿಯಾ ತ್ರಿವೇದಿ ಜತೆ ಹಸೆಮಣೆ ಏರಿದ್ದರು. 2011ರಲ್ಲಿ ಫ್ಯಾಷನ್ ಸಪ್ತಾಹವೊಂದರಲ್ಲಿ ನೇಹಾ ಹಾಗೂ ಜೇಮ್ಸ್ ಪರಿಚಿತರಾಗಿದ್ದರು. ಅಲ್ಲಿಂದ ಇಬ್ಬರ ಸಂಬಂಧ ಗಟ್ಟಿಯಾಗಿ ಬೆಳೆದಿತ್ತು. ಇಬ್ಬರಿಗೂ ಆತ್ಮೀಯರಾಗಿರುವ ಗೆಳೆಯರ ಪ್ರಕಾರ ನೇಹಾರನ್ನು ಜೇಮ್ಸ್ ತುಂಬಾ ಪ್ರೀತಿಸುತ್ತಿದ್ದಾರಂತೆ. ಇಬ್ಬರ ನಡುವೆ ಸಣ್ಣ ಒಡಕು ಆಗಿರಬಹುದಷ್ಟೇ. ಇದೆಲ್ಲಾ ಸ್ವಲ್ಪ ದಿನಕ್ಕೆ ಸರಿಹೋಗುತ್ತದೆ ಎನ್ನುವ ಗೆಳೆಯರು, ಇಬ್ಬರೂ ಮತ್ತೆ ಒಂದಾಗಲಿದ್ದಾರೆ ಎಂಬ ಭರವಸೆ ವ್ಯಕ್ತಪಡಿಸುತ್ತಾರೆ.